ಮತ್ತಷ್ಟು ಸೇರಿಸಿ ಒಟ್ಟು ಹದಿನೈದು ಸಾವಿರ ಕೊಟ್ಟು ಕಳುಹಿಸಿದ್ದರು. ಗೋವಿಂದನ ಪಾಲಿಗೆ ಅದು ದೊಡ್ಡ ಮೊತ್ತವೆನಿಸಿತು. ಆ ದುಡ್ಡನ್ನು ಏನು ಮಾಡುವುದೆಂದು ರಾತ್ರಿಯ ತನಕವೂ ಹತ್ತಾರು ರೀತಿಯಲ್ಲಿ ಯೋಚಿಸಿ ಅದೇ ಗುಂಗಿನಲ್ಲಿ ನಿದ್ದೆ ಹೋದ. ಅದೇನೆನ್ನಿಸಿತೋ ಏನೋ ಮಾರನೇ ದಿನ ಎದ್ದವನೇ ಅಷ್ಟೂ ದುಡ್ಡನ್ನು ಜೇಬಿಗೆ ತುರುಕಿಕೊಂಡು ತಿರುಪತಿಯ ಹಾದಿ ಹಿಡಿದ. ರೈಲು, ಬಸ್ಸು ಹತ್ತಿಳಿದು, ಭಾಷೆಯೂ ಗೊತ್ತಿಲ್ಲದ ಅಪರಿಚಿತ ಊರಿಗೆ ಮೊದಲ ಬಾರಿಗೆ ಬಂದ ಗೋವಿಂದನಿಗೆ ಅಂತಹ ವ್ಯತ್ಯಾಸವೇನೂ ಕಾಣಲಿಲ್ಲ.

ಯಾರು ಯಾರನ್ನೋ ಕೇಳಿ, ಒಂದಷ್ಟು ಅಲೆದಾಡಿ ತಿರುಪತಿ ಬೆಟ್ಟ ಹತ್ತಿದ. ಆಶ್ಚರ್ಯವಾಯಿತು. ಯಾರ ಬಾಯಲ್ಲಿ ನೋಡಿದರೂ ಗೋವಿಂದ, ಗೋವಿಂದ ಎಂದು ಇವನ ಹೆಸರೇ ಬರುತ್ತಿತ್ತು. ಗುಂಪಲ್ಲಿ ಗೋವಿಂದ ಎಂಬಂತೆ ಇವನೂ ತನ್ನ ಹೆಸರನ್ನೇ ಹೇಳುತ್ತಾ ಬೆಟ್ಟ ಹತ್ತಿ ದೇವರ ಬಳಿ ತಲುಪಿದ. ದೇವರ ರತ್ನ ಖಚಿತ ವಿಗ್ರಹವನ್ನು ದೂರದಿಂದಲೇ ಕಂಡ ಗೋವಿಂದ ಹಲ್ಲು ಕಿರಿಯುತ್ತಾ ದೇವರನ್ನೇ ನೋಡುತ್ತಾ ಮುಂದೆ ಸಾಗಿದ. ದೇವರ ಎದುರು ಒಂದರ್ಧ ತಾಸು ನಿಂತು ಬೇಡಿಕೊಳ್ಳಬೇಕು ಎಂದುಕೊಂಡ. ಆದರೆ, ದೇವರ ಹತ್ತಿರ ಹೋಗುವಷ್ಟರಲ್ಲಿ ಹತ್ತು ಸೆಕೆಂಡಷ್ಟೂ ನಿಲ್ಲಲು ಬಿಡದೆ ದರದರನೆ ಎಳೆದು ಮುಂದೆ ತಳ್ಳಿದರು. ಯಾರು ತಳ್ಳಿದರು, ಏಕೆ ತಳ್ಳಿದರು ಎಂದೆಲ್ಲಾ ಗೊಂದಲಕ್ಕೆ ಬಿದ್ದ ಗೋವಿಂದ ಗುಂಪು ಹರಿಯುತ್ತಿದ್ದ ಕಡೆಗೆ ಯಾಂತ್ರಿಕವಾಗಿ ಹೆಜ್ಜೆ ಹಾಕಿದ. ಸ್ವಲ್ಪ ದೂರ ಹೋಗುವಷ್ಟರಲ್ಲಿ ದೇವರನ್ನು ಮತ್ತೊಮ್ಮೆ ನೋಡಬೇಕೆನ್ನಿಸಿತು. ಹೇಗೇಗೋ ನುಸುಳಿಕೊಂಡು ಮತ್ತೆ ಕೆಳಗಿಳಿದು ಗೋವಿಂದ, ಗೋವಿಂದ ಎನ್ನುತ್ತಾ ಬೆಟ್ಟ ಹತ್ತಿ ಸಾಲಿನಲ್ಲಿ ನಿಂತ ಆಗಲೂ ತಳ್ಳಿ ಹಾಕಿದರು. ಪ್ರತಿ ಬಾರಿ ತಳ್ಳಿದಾಗಲೂ ಹಟಕ್ಕೆ ಬಿದ್ದ ಗೋವಿಂದ ತನ್ನ ಕೈಯಲ್ಲಿದ್ದ ಅಷ್ಟೂ ದುಡ್ಡನ್ನು ದೊಡ್ಡ ಕಾಣಿಕೆ ಡಬ್ಬಿಯೊಂದಕ್ಕೆ ಸುರಿದು ಗೋವಿಂದಾ ನೀನೇ ಗತಿ, ಒಮ್ಮೆಯಾದರೂ ಕಾಣಿಸಿಕೊಳ್ಳಪ್ಪಾ ಎಂದು ಕೈ ಮುಗಿದ. ಅವನೊಂದಿಗೆ ಲಕ್ಷಾಂತರ ಜನರು ಗೋವಿಂದನನ್ನು ಹುಡುಕುತ್ತಿದ್ದರು.

ಇತ್ತ ಗುರುರಾಜನಿಗೆ ಫೋನು ಮಾಡಿ ವಿಷಯ ತಿಳಿಸಿದ ಶ್ಯಾಮರಾಯರು, ಗೋವಿಂದನನ್ನು ಶಿವಮೊಗ್ಗಕ್ಕೆ ವಾಪಸು ಕಳುಹಿಸಿರುವುದಾಗಿಯೂ ಅವನನ್ನು ಜಾಗ್ರತೆಯಿಂದ ನೋಡಿಕೊಳ್ಳುವಂತೆಯೂ ತಿಳಿಸಿದರು. ಆದರೆ, ವಾರ ಕಳೆದರೂ ಗೋವಿಂದನ ಪತ್ತೆ ಇಲ್ಲವಾದಾಗ ಗುರುರಾಜ ಗಾಬರಿಯಾದ. ಹಳೇ ಮನೆಗೆ ಹೋಗಿ ನೋಡಿದರೆ ಬಾಗಿಲು ತೆರೆದೇ ಇತ್ತು. ಒಳಗೆ ಹೋಗಿ ಹುಡುಕಿದ. ಗೋವಿಂದ ಅಲ್ಲಿ ಬದುಕಿದ್ದ ಎಂದು ಹೇಳಲು ಯಾವುದೇ ಕುರುಹುಗಳು ಸಹ ಇರಲಿಲ್ಲ. ಬದಲಿಗೆ ಅಪ್ಪಯ್ಯ ಬರೆದಿಟ್ಟಿದ್ದ ಒಂದಷ್ಟು ಕಾಗದಗಳು ಕಪಾಟಿನಲ್ಲಿ ಸಿಕ್ಕವು. ಎಲ್ಲವನ್ನೂ ಕೂಡಿಟ್ಟು ಮನೆಗೆ ಬೀಗ ಹಾಕಿ, ಪೊಲೀಸ್ ಸ್ಟೇಷನ್ನಿಗೆ ಕಂಪ್ಲೇಟ್ ಕೊಡಲು ಹೊರಟ. ಪೊಲೀಸರು ಕಾಣೆಯಾದ ಗೋವಿಂದನ ಫೋಟೊ ಕೇಳಿದರು. ಗುರುರಾಜ ಎಲ್ಲಾ ಕಡೆ ತಡಕಾಡಿದ. ಪರ್ಸಿನಲ್ಲಿದ್ದ ತಿರುಪತಿ ದೇವರ ಫೋಟೊ ಒಂದನ್ನು ಹೊರತುಪಡಿಸಿ ಮತ್ತೇನೂ ಸಿಗಲಿಲ್ಲ. ಮನೆಗೆ ಬಂದವನೇ ಶ್ಯಾಮರಾಯರಿಗೆ ಫೋನು ಮಾಡಿ ಗೋವಿಂದ ಕಾಣೆಯಾದ ಕುರಿತು ತಿಳಿಸಿದ. ಒಂದಷ್ಟು ಸಾಧ್ಯತೆಗಳನ್ನು ತೆರೆದಿಟ್ಟ ಶ್ಯಾಮರಾಯರು, "ಯಾವುದಕ್ಕೂ ತಿರುಪತಿ ದೇವರಿಗೊಂದು ಕಾಣಿಕೆ ಕಳಿಸು ಮಾರಾಯ, ಸಿಕ್ಕಿದ್ರೂ ಸಿಗಬಹುದು" ಎಂದರು. ಹಿಂದೆಮುಂದೆ ನೋಡದ ಗುರುರಾಜ ಅದನ್ನೂ ಮಾಡಿದ. ಗುರುರಾಜ ತಿರುಪತಿಗೆ ಕಾಣಿಕೆ ಕಳುಹಿಸಿದ್ದನ್ನು ಗಮನಿಸಿದ ಮಾಲತಿ, ಅವನಿಗಿಂತ ಎರಡು ರೂಪಾಯಿ ಜಾಸ್ತಿಯೇ ಇಟ್ಟು, ಗೋವಿಂದ ಈ ಜನ್ಮದಲ್ಲಿ ಹಿಂತಿರುಗಿ ಬರುವುದು ಬೇಡವೆಂದು ಬಲವಾಗಿ ಬೇಡಿ

